ಉಪಾಧ್ಯಕ್ಷರು.—ಮಾನ್ಯ ಮಂಖ್ಯಿ ಮಂತ್ರಿಗಳು ನಮ್ಮ ರಾಜ್ಯದ ಯೋಜನೆಗಳಿಗಾಗಿ ಎಷ್ಟು ಧನ ಸಹಾಯ ಬೇಕಾಗುತ್ತದೆಂಬ ಬಗ್ಗೆ ಪ್ರಧಾನಿಯವರೊಡನೆ ಚರ್ಚೆ ಮಾಡಿದ್ದಾರೆ. ಆದ್ದರಿಂದ, ಈಗ ಇರತಕ್ಕ ಪ್ರಶ್ನೆಯನ್ನು ವಿಷಯಾಂತರಿಸುವುದಕ್ಕೆ ಹೋಗುವುದು ಬೇಡ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಆಗಲೇ ಹೇಳಿದ್ದೇನೆ, ಈ ಸದನದ ಮುಂದೆ ಒಂದೆರಡು ದಿನಗಳಲ್ಲಿ ಅಭಾವ ಪರಿಸ್ಥಿತಿ ಬಗ್ಗೆ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಲಿದ್ದಾರೆ. ಆ ಹೇಳಿಕೆ ಬಂದಮೇಲೆ ಚರ್ಚೆ ಮಾಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಿಂದಿನ ಸರ್ಕಾರದವರು ಮೆಮೋರ್ಯಾಂಡಂ ಅನ್ನು ಕಳುಹಿಸಲಿಲ್ಲವೆಂದು ಮುಖ್ಯ ಮಂತ್ರಿಗಳು ಹೇಳಿದ್ದರಿಂದ ಇದು ಉದ್ಭವವಾಯಿತು. ಮೆಮೋರ್ಯಾಂಡಂ ವಿಚಾರದಲ್ಲಿ ನಮ್ಮ ಅಭಿಪ್ರಾಯವೂ ಇದೆ. ಆದುದರಿಂದ ಇದರ ಬಗ್ಗೆ ಚರ್ಚೆಯಾಗಲಿ. ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ ಅದನ್ನು ಸರಿಯಾಗಿ ಹೇಳಿದ್ದಾರೋ ಇಲ್ಲವೋ ಎಂಬ ವಾದ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಪ್ರಶ್ನೆಗೆ ಉತ್ತರ ರೂಪವಾಗಿ ಹೇಳಿದೆನೆಂದರೆ, ಕೇಂದ್ರ ಸರ್ಕಾರದವರು ಮಲತಾಯಿ ಧೋರಣೆ ತೋರಿಸಿದ್ದಾರೆಂದು ಕೇಳಿದ ಪ್ರಶ್ನೆಗೆ ಇದನ್ನು ಹೇಳಬೇಕಾದ ಪ್ರಸಂಗ ಬಂತು. ಇಲ್ಲದಿದ್ದರೆ ಕೇಂದ್ರ ಸರ್ಕಾರವನ್ನು ದೂರ ಮಾಡಬಹುದೆ? ಅದು ನಿಮ್ಮ ಸರ್ಕಾರ ತಾನೆ ?

ಹರಪನಹಳ್ಳಿಯಲ್ಲಿ ಜನರಲ್ ಆಸ್ಪತ್ರೆ ಕಟ್ಟುವ ಬಗ್ಗೆ.

೮೭ ಶ್ರೀ ಬಿ. ಹೆಚ್. ಯಂಕನಾಯಕ್ (ಹರಪನಹಳ್ಳಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಹರಪನಹಳ್ಳಿಯಲ್ಲಿ ೫೦ ಹಾಸಿಗೆಗಳ ಜನರಲ್ ಆಸ್ಪತ್ರೆಯ ಕಟ್ಟಡವು ಸೂಕ್ತವಾದ ಜಮೀನನ್ನು ಕೊಟ್ಟಿದ್ದರೂ ಸಹ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು ?

(ಆ) ಹಾಗಿದ್ದರೆ ಆಸ್ಪತ್ರೆಯ ಕಟ್ಟಡವು ಶೀಘ್ರವಾಗಿ ಪ್ರಾರಂಭವಾಗುವುದೇ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ಹರಪನಹಳ್ಳಿಯಲ್ಲಿ ಇಂಥ ಆಸ್ಪತ್ರೆಯೊಂದನ್ನು ನಿರ್ಮಿಸಲು ಸರ್ಕಾರ ಆದೇಶ ಹೊರಡಿಸಿಲ್ಲ.

(ಆ) ಮೇಲೆ ಕೊಟ್ಟ ಉತ್ತರದಿಂದ ಪ್ರಶ್ನೆಯು ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಕನ್ನಡವನ್ನು ಆಡಳಿತ ಭಾಷೆಯೆಂನ್ನಾಗಿ ಮಾಡುವ ಬಗೆ .

೮೮ ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ರಾಜ್ಯ ಸರಕಾರವು ಕನ್ನಡವನ್ನು ಆಡಳಿತ ಭಾಷೆಯಾಗಿ ಮತ್ತು ಕಡ್ಡಾಯವಾಗಿ ಎಲ್ಲಾ ಹಂತದಲ್ಲಿ ತರುವುದಕ್ಕಾಗಿ ಒಂದು ಸುತ್ತೋಲೆಯನ್ನು ಜಾರಿಗೊಳಿಸಲು ಕೊಟ್ಟಿರುವುದು ನಿಜವೇ ?

(ಆ) ಈ ದಿಸೆಯಲ್ಲಿ ಕೆಲವು ನ್ಯೂನತೆಗಳು ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

(ಇ) ಹಾಗಿದ್ದಲ್ಲಿ ವೈದ್ಯಕೀಯ ಹಾಗೂ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಕೆಲವು ಕಷ್ಟತರವಾದ ಪದಗಳು ಇರುವುದು ನಿಜವಲ್ಲವೇ ?

(ಈ) ಹಾಗಿದ್ದಲ್ಲಿ ಸರಕಾರವು ಈ ನ್ಯೂನತೆಗಳನ್ನು ಸರಿಪಡಿಸಲು ಒಂದು ರಾಜ್ಯಮಟ್ಟದ ಸಮಿತಿಯನ್ನು ನೇಮಿಸುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

(ಅ) ನಿಜ

(ಆ) ಒಂದು ಮಹತ್ವದ ಧೋರಣೆಯನ್ನು ಅನುಷ್ಠಾನಕ್ಕೆ ತರುವಾಗ ಕೆಲವೊಂದು ಕುಂದು ಕೊರತೆಗಳು ಬರುವುದು ಸ್ವಾಭಾವಿಕ.

(ಇ) ತಾಂತ್ರಿಕ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿರುವ ಕಷ್ಟತರವಾದ ಪದಗಳನ್ನು ಕನ್ನಡಕ್ಕೆ ಭಾಷಾಂತರಿಸುವುದು ಹಾಗೂ ತಜ್ಞರ ಅಭಿಪ್ರಾಯದೊಂದಿಗೆ ಪ್ರತ್ಯೇಕ ಶಬ್ದಗಳನ್ನು ರೂಪಿಸುವುದಕ್ಕಾಗಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಕೈಪಿಡಿಗಳನ್ನು ಹೊರತರಲು ಯೋಜನೆಯನ್ನು ರೂಪಿಸಲಾಗಿದೆ. ಈ ಕಾರ್ಯವು ಕಾಲ ವಿಳಂಬವಾಗುವುದರಿಂದ, ಅಲ್ಲಿಯವರೆಗೆ ಈಗ ಬಳಕೆಯಲ್ಲಿರುವ ತಾಂತ್ರಿಕ ಶಬ್ದಗಳನ್ನೇ ಉಪಯೋಗಿಸುವುದು ಸೂಕ್ತವೆನಿಸುತ್ತದೆ. ಈ ಅಂಶವನ್ನು ದಿನಾಂಕ ೧೦ನೇ ಫೆಬ್ರುವರಿ ೧೯೮೫ರ ಸರ್ಕಾರದ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

(ಈ) ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವಲ್ಲಿ ವಿವಿಧ ಯೋಜನೆಗಳನ್ನು ರೂಪಿಸುವಲ್ಲಿ ಹಾಗೂ ಅವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಇರಬಹುದಾದ ಎಡರು ತೊಡರುಗಳನ್ನು ಪರಿಶೀಲಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಅಧಿಕಾರಿ ಸಮಿತಿಯೊಂದು ಈಗಾಗಲೇ ಅಸ್ತಿತ್ವದಲ್ಲಿದೆ. ಈ ಕಮಿಟಿಯನ್ನು ಪುನರ್ಘಟಿಸಲು ಸರ್ಕಾರ ತೀರ್ಮಾನಿಸಿದೆ..

ಶ್ರೀ ಎ. ನಾಗರಾಜು.—ರಾಜ್ಯಮಟ್ಟದ ಸಮಿತಿ ಮಾಡಿರುವುದು ಸಂತೋಷ. ಆದರೆ ಅದನ್ನು ಪುನರ್‌ಘಟಿಸಲು ಸರ್ಕಾರ ತೀರ್ಮಾನಿಸಿರುವುದಾಗಿ ಹೇಳಿದ್ದೀರಿ. ಪುನರ್‌ಘಟಿಸುವಾಗ ಟೆಕ್ನಿಕಲ್ ಮತ್ತು ಮೆಡಿಕಲ್‌ನಲ್ಲಿ ಅನುಭವ ಇರತಕ್ಕ ಅರ್ಹರನ್ನು ಮತ್ತು ನವ್ಯ ರಾಜ್ಯದ ಕವಿಗಳನ್ನು ಸೇರಿಸಿ ಕಮಿಟಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಹೌದು. ಈಗಿರತಕ್ಕದ್ದು ಕೇವಲ ಅಧಿಕಾರಿಗಳ ಕಮಿಟಿ. ಇದರಲ್ಲಿ ಕನ್ನಡ ಭಾಷೆಯಲ್ಲಿ ಅತ್ಯಂತ ಪಾಂಡಿತ್ಯ ಇರತಕ್ಕ ಮತ್ತು ಯಾರಿಗೆ ಈ ತಾಂತ್ರಿಕ ಶಬ್ದಗಳನ್ನು ಅನುವಾದ ಮಾಡುವುದರಲ್ಲಿ ಅನುಭವ ಇದೆಯೋ ಅಂಥ ಜನರನ್ನು ಸೇರಿಸಿ ಒಂದು ಹೊಸ ಕಮಿಟಿ ಮಾಡಬೇಕೆಂದು ಸರ್ಕಾರದ ಉದ್ದೇಶ.

ಶ್ರೀ ಎ. ನಾಗರಾಜು.—ಈ ಕಮಿಟಿಯು ವರದಿಯನ್ನು ತರಿಸಿಕೊಳ್ಳುವುದಕ್ಕೆ ಸರ್ಕಾರ ಏನಾದರೂ ನಿರ್ದಿಷ್ಟವಾದ ವೇಳೆಯನ್ನು ಗೊತ್ತು ಮಾಡುತ್ತದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಸಮಿತಿ ವರದಿ ಕೊಡತಕ್ಕದ್ದು ಇಲ್ಲ. ಸಮಿತಿ ಮೇಲ್ವಿಚಾರಣೆ ಮಾಡುತ್ತದೆ. ತಾಂತ್ರಿಕ ಶಬ್ದಗಳನ್ನು ಅನುವಾದ ಮಾಡುವಲ್ಲಿ ಎಲ್ಲಿ ಕಷ್ಟವಾಗುತ್ತದೆ ಅಲ್ಲಿ ಅವನ್ನು ನಿವಾರಣೆ ಮಾಡುವ ಕೆಲಸ ಮಾಡುತ್ತದೆ.